ಸಿಪಾಲಟಿಯವರು ಕೊಡಬೇಕಾಗಿತ್ತು. ಅದನ್ನು ಮುನಿಸಿಪಾಲಟಿಯವರು ಕೊಡಲಿಲ್ಲ. 5888 ರೂಪಾಯಿಗಳನ್ನು ಮಾತ್ರ ಕೊಟ್ಟರು. ಆದ್ದರಿಂದ ಆ ಪ್ರಶ್ನೆ ಅಲ್ಲಗೇ drop ಆಗಿದೆ. ಆದ್ದರಿಂದ ಸರ್ಕಾರದಲ್ಲಿ ಪೆಂಡಿಂಗ್ ಇದೆಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ, ಮುನಿಸಿಪಾಲಿಟಿಯವರು ಆ ಹಣ ಕೊಡುವವರೆಗೂ acquisition ಕಾರ್ಯಕ್ರಮವನ್ನು ಮುಂದುವರಿಸಕೂಡದೆಂದು ಹೇಳಿದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು.

ಶ್ರೀ ಕೆ. ಕೆಂಚಪ್ಪ.—ದುಡ್ಡು ಕೊಡುವವರೆಗೂ ತೆಗೆದುಕೊಳ್ಳಬೇಡಿ ಎಂದು ಹೇಳುವುದು ಒಂದು Procedure ಆದೀತೇ ?

ಶ್ರೀ ಆರ್. ಚೆನ್ನಿಗರಾಮಯ್ಯ.–Compensation ಕೊಟ್ಟಿಲ್ಲವೆಂದು ಅಲ್ಲಿಗೇ ನಿಂತಿದೆ.

ಶ್ರೀ ಬಿ. ರಾಚಯ್ಯ.—ಎಷ್ಟು ಜಮೀನನ್ನು ಮುನಿಸಿಪಾಲಿಟಿಯವರು ತೆಗೆದುಕೊಂಡಿದ್ದರೋ ಅಷ್ಟಕ್ಕೆ ಮುನಿಸಿಪಾಲಿಟಿಯವರು ಕೊಡಬೇಕಾದ್ದು ಧರ್ಮವಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು.

ಶ್ರೀ ಬಿ. ರಾಚಯ್ಯ.—ಅವರು ಬಾಕಿ ಕೊಡದೆ ಇದ್ದರೆ ಸರ್ಕಾರದವರು ಅವರನ್ನು ಕೊಡುವಂತೆ ಮಾಡುವುದಕ್ಕೆ ಅಧಿಕಾರ ಹೊಂದಿಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಧಿಕಾರ ಹೊಂದಿದ್ದಾರೆ. ಮುನಿಸಿಪಾಲಿಟಿಯವರನ್ನು ಕೇಳುತ್ತಿದ್ದಾರೆ. ಕಾಲವಿಳಂಬವಾಗಿದೆ.

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಈಗಾದರೂ ಮುನಿಸಿಪಾಲಿಟಿಯವರಿಗೆ ಬಾಕಿಯನ್ನು ಕೊಡಬೇಕೆಂದು ಹೇಳಿ ಸೂಚನೆ ಕೊಡುತ್ತಾರೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೊಡುತ್ತೇವೆ.

ಶ್ರೀ ಜಿ. ವೆಂಕಟೇಗೌಡ.—ಈ 13 ಎಕರೆಗಳು ಯಾರಿಗೆ ಸೇರಿವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ವೆ ನಂಬರು ಗೊತ್ತಿದೆ. ಯಾರಿಗೆ ಸೇರಿದ್ದು ಎಂಬುದು ಗೊತ್ತಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಅವರಿಗೆ ಹಣ ಪಾವತಿ ಮಾಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ಕಾರದವರು ಮಾಡುವುದಿಲ್ಲ. ಅಕ್ಸೆಸಿಷ್ಟ್ ಆಫೀಸರು ಮಾಡುತ್ತಾರೆ.

Extension of National Extension Service Schemes to Haveri.

Q.—1763. Smt. LEELAVATI VENKATESH MAGADI (Shirahatti).—

Will the Government be pleased to state :—

(*a*) whether it is a fact that the District Development Board had recommended for taking Haveri Taluk under the N.E.S. scheme immediately after Shirahatti ;

(*b*) the reasons for the delay in not taking up this taluk ;

(*c*) when do they propose to bring the said taluk under the N. E. S. scheme ?

A.—Sri S. NIJALINGAPPA (Chief Minister).—

(*a*) Yes.

(*b*) The number of Blocks allotted was limited and as such it was not possible to allocate two blocks to Haveri taluk during the year 1957-58.

(*c*) All the taluks in the State are likely to be covered by N.E.S. Blocks before the end of the Second Plan period.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ.–ಪ್ರಶ್ನೆಯ (*a*) ಭಾಗಕ್ಕೆ ಉತ್ತರವಾಗಿ ತಾವು ಹಾವೇರಿ ತಾಲ್ಲೂಕಿಗೆ ರಾಷ್ಟ್ರೀಯ ವಿಸ್ತರಣ ಯೋಜನೆಯನ್ನು ಜಾರಿ ಮಾಡಬೇಕೆಂದಿದೆಯೆಂದು ಹೇಳಿದ್ದೀರಿ, ಆದರೆ, (*b*) ಭಾಗದ ಉತ್ತರದಲ್ಲಿ ಎರಡು ಬ್ಲಾಕ್ ಹಂಚಿಕೊಡಲು ಸಾಧ್ಯವಿರಲಿಲ್ಲವೆಂದು ಹೇಳಿದ್ದೀರಿ. ಹಾಗಾದರೆ, ಈಗ ಹಾವೇರಿ ತಾಲ್ಲೂಕಿನಲ್ಲಿ ಬ್ಲಾಕ್ ಇದೆಯೇ ?

*ಶ್ರೀ ರಾಮಕೃಷ್ಣ ಹೆಗ್ಗಡೆ (ಯೋಜನೆ ಮತ್ತು ಅಭಿವೃದ್ಧಿ ಶಾಖೆಯ ಉಪಮಂತ್ರಿಗಳು).—ಹಾವೇರಿಯ ಜನಸಂಖ್ಯೆ ಒಂದು ಲಕ್ಷಕ್ಕೆ ಮೀರಿದೆ. ಈಗಿನ ಹೊಸ ಥೋರಣ್ಣೆಯ ಪ್ರಕಾರ ಯಾವುದೇ ಒಂದು ತಾಲ್ಲೂಕಿನ ಕೆಲವು ಭಾಗಗಳನ್ನು ತೆಗೆದುಕೊಂಡು ಒಂದು ಬ್ಲಾಕ್ ಕೊಟ್ಟು ಮಿಕ್ಕ ಭಾಗವನ್ನು ಬಿಡುವುದಕ್ಕೆ ಬದಲಾಗಿ ಒಟ್ಟಾಗಿ ತೆಗೆದುಕೊಂಡು ಎರಡು ಬ್ಲಾಕ್ ಅಥವಾ ಹೆಚ್ಚಿಗೆ ಮಾಡಿಕೊಂಡು ಕೆಲಸ ಮಾಡಬೇಕೆಂದಿದೆ. ನಮಗೆ ಈ ನಲ ಕಡಮೆ ಬ್ಲಾಕ್ ಬಂದದ್ದರಿಂದ ಹಾವೇರಿಗೆ ಎರಡು ಕೊಡುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ಕೊಡಲಿಲ್ಲ.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ.—ಎರಡನೆಯ ಪಂಚವಾರ್ಷಿಕ ಯೋಜನೆಯ ಅಖೈರಿನೊಳಗೆ ಇಡಿಯ ರಾಜ್ಯದಲ್ಲಿ ಎಲ್ಲ ಹಳ್ಳಿಗಳಿಗೂ ಈ ಯೋಜನೆಯನ್ನು ಅನ್ವಯಿಸುತ್ತೇವೆಂದು ಹೇಳಿದ್ದೀರಿ. ನಿಶ್ಚಿತವಾಗಿ ಹಾವೇರಿ ತಾಲ್ಲೂಕನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಹೇಳುವುದಕ್ಕಾಗುವುದಿಲ್ಲ.

House Rent Allowance of the Employees of Madras State transferred to Mysore.

Q.—1775. Sri Y. MANJAYA SHETTY (Baindur).—

Will the Government be pleased to state :—

(*a*) whether the N.G.O.'s of old Madras State now transferred to Mysore State were entitled to House Rent Allowances when they were in Madras State and if so at what rate ;

(*b*) whether the said allowances are now continued ?